ಗುಲ್ಬರ್ಗ ಸರಕಾರಿ ಕ್ಷೀರಾಗಾರದಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸೇವೆಗಳನ್ನು ಖಾಯಂ ಗೊಳಿಸುವ ಬಗ್ಗೆ.

119 ಶ್ರೀ.ಎಸ್. ಕೆ. ಕಾಂತ.(ಗುಲ್ಬರ್ಗ).—ಮಾನ್ಯ ಪಶುಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :--

ಅ) ಗುಲ್ಬರ್ಗಾ ಹಾಲಿನ ಡೈರಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರು ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತಲಿದ್ದು ಇನ್ನೂ ಅವರನ್ನು ಖಾಯಂಗೊಳಿಸದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಅಲ್ಲಿ ಖಾಯಂ ಖಾಲಿ ಜಾಗ ಇದ್ದಾಗ್ಯೂ ಇವರನ್ನು ಭರ್ತಿ ಮಾಡಿಕೊಳ್ಳುವ ವಿಷಯ ಸರಕಾರದವರಲ್ಲಿದೆಯೆ ?

ಶ್ರೀ ಜೆ. ವಿಶ್ವನಾಥರೆಡ್ಡಿ (ಪಶುಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು):—

ಅ) ಗುಲ್ಬರ್ಗ ಸರಕಾರಿ ಕ್ಷೀರ ಕೇಂದ್ರದ ದಿನಗೂಲಿ ಕೆಲಸಗಾರರ ಸೇವೆಗಳನ್ನು ಖಾಯಂ ಮಾಡುವ ವಿಚಾರ ಸರಕಾರದ ಗಮನದಲ್ಲಿದೆ.

ಆ) ಗುಲ್ಬರ್ಗಾ ಕ್ಷೀರ ಕೇಂದ್ರ 18 ಜನ ದಿನಗೂಲಿ ಕೆಲಸಗಾರರನ್ನು ಖಾಯಂಗೊಳಿಸುವ ವಿಚಾರ ಸರ್ಕಾರದ ತೀವ್ರ ಪರೀಶಿಲನೆಯಲ್ಲಿದೆ.

ಶ್ರೀ ಎಸ್. ಕೆ. ಕಾಂತ--ಸ್ವಾಮಿ, ಗುಲ್ಬರ್ಗಾ ಹಾಲಿನ ಡೈರಿಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ಕೆಲಸಗಾರರು ಸುಮಾರು 10 ವರ್ಷಗಳಿಂದ ಕೆಲಸ ಮಾಡುತ್ತಲಿದ್ದು ಇನ್ನೂ ಅವರನ್ನು ಏತಕ್ಕೆ ಖಾಯಂಗೊಳಿಸಿಲ್ಲ, ಮತ್ತು ಖಾಲಿ ಜಾಗ ಇದ್ದಾಗ್ಯೂ ಸಹ ಅವರನ್ನು ಏತಕ್ಕೆ ಭರ್ತಿ ಮಾಡಿಲ್ಲ. ?

ಶ್ರೀ ವಿಶ್ವನಾಥ್ ರೆಡ್ಡಿ —ಅದು ಸರಕಾರದ ಪರೀಶಿಲನೆಯಲ್ಲಿದೆ.

ಶ್ರೀ ಎಸ್. ಕೆ. ಕಾಂತ —ಎಷ್ಟು ದಿನಸದಿಂದ ಪರಿಶೀಲನೆಯಲ್ಲಿದೆ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ವಿಶ್ವನಾಥ್ ರೆಡ್ಡಿ .—ಆ ವಿವರ ನನ್ನ ಹತ್ತಿರವಿಲ್ಲ. ಮಾನ್ಯ ಸದಸ್ಯರಿಗೆ ಬೇಕಿದ್ದರೆ ಆ ಫೈಲ್ ತರಿಸಿ ಉತ್ತರವನ್ನು ಕೊಡುತ್ತೇನೆ.

ಖಾಲಿ ಇರುವ ಪಶುಸಂಗೋಪನಾ ಇನ್ಸ್‌ಪೆಕ್ಟರುಗಳು ಮತ್ತು ಕಾಂಪೌಂಡರುಗಳು—ತರಬೇತಿ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ

120 ಶ್ರೀ ಎಂ. ವಿ. ಅಪ್ಪಾಸ್ವಾಮಿ ರೆಡ್ಡಿ (ಬಾಗೆಪಲ್ಲಿ).—ಮಾನ್ಯ ಪಶುಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :--

ಅ) ಖಾಲಿ ಬಿದ್ದಿರುವ ಪಶುಸಂಗೋಪನಾ ಇನ್ಸ್‌ಪೆಕ್ಟರುಗಳು ಮತ್ತು ಕಾಂಪೌಂಡರುಗಳ ಸಂಖ್ಯೆ ಎಷ್ಟು ;

ಆ) ಈ ಹುದ್ದೆಗಳನ್ನು ಭರ್ತಿಮಾಡಲು ಮೂರು ವರ್ಷಗಳ ಹಿಂದೆಯೇ ಅರ್ಜಿಗಳನ್ನು ಕರೆದಿದ್ದರೂ ಸರ್ಕಾರ ತೆಗೆದುಕೊಂಡ ಕ್ರಮವೇನು ;

ಇ) ಕಾಂಪೌಂಡರುಗಳ ತರಬೇತಿಗಾಗಿ ಇರುವ ತರಬೇತಿ ಕೇಂದ್ರಗಳೆಷ್ಟು ;

ಈ) ಹಾಲಿ ಇರುವ ತರಬೇತಿ ಕೇಂದ್ರಗಳು ಸಾಕಾಗದಿದ್ದಲ್ಲಿ, ಅವುಗಳನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ವಿಶ್ವನಾಥರೆಡ್ಡಿ .—ಪಶುಸಂಗೋಪನಾ ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು:--

ಅ) 771 ಹುದ್ದೆಗಳ ಪಶುಸಂಗೋಪನಾ ಇನ್ಸ್‌ಪೆಕ್ಟರುಗಳು 720 ಹುದ್ದೆಗಳ ಕಾಂಪೌಂಡರುಗಳು.

ಆ) ನೇಮಕ ಮಾಡಬೇಕಾದ ಹುದ್ದೆಗಳನ್ನು ಭರ್ತಿ ಮಾಡಲು ಮೂರು ವರ್ಷಗಳ ಹಿಂದೆಯೇ ಅರ್ಜಿಗಳನ್ನು ಕರೆದಿದ್ದರೂ ಆಗಾಗ ಸರ್ಕಾರದ ನೇಮಕಾತಿ ನೀತಿಯಲ್ಲಾದ ಬದಲಾವಣೆಯಿಂದ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲ. ಮತ್ತು ನೇಮಕಾತಿ ಕಮಿಟಿಗಳನ್ನು ನಿರ್ಮಿಸಲಾಗದಿದ್ದುದೂ ಕಾರಣವಾಗಿದೆ.

ಇ) ಇಲ್ಲ.

ಈ) ಕಾಂಪೌಂಡರುಗಳ ತರಬೇತಿಗಾಗಿ 18 ತರಬೇತಿ ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

ಶ್ರೀ ಎ. ವಿ. ಅಪ್ಪಾಸ್ವಾಮಿ ರೆಡ್ಡಿ.— ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ ಸ್ವಾಮಿ ?

ಶ್ರೀ ವಿಶ್ವನಾಥರೆಡ್ಡಿ .— ಪರಿಶೀಲನೆ ಮಾಡಲಾಗುತ್ತಿದೆ.

ಶ್ರೀ ನಿ. ಕೆ. ರಾಮಯ್ಯ —ಸ್ವಾಮಿ, ಆರ್ ವಿ. ಡಿ. ಮತ್ತು ವಿ. ಡಿ. ಗಳಲ್ಲಿ ಡಾಕ್ಟರ್‌ಗಳು ಇಲ್ಲ, ಕಾಂಪೌಂಡರುಗಳು ಇಲ್ಲ. ಹೀಗಿರುವುದರಿಂದ ಆರ್. ವಿ. ಡಿ. ಗಳನ್ನು ವಿ. ಡಿ. ಗಳನ್ನಾಗಿ ಪರಿವರ್ತನೆ ಮಾಡುವ ಬಗ್ಗೆ ಆಲೋಚನೆ ಮಾಡುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ .—ಪರಿಶೀಲನೆ ಮಾಡುವ ಬಗ್ಗೆ ಆಲೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಏನು ನಿರ್ದೇಶನವನ್ನು ಇತ್ತಿದ್ದಾರೆಂಬುದರ ಬಗ್ಗೆ ತಿಳಿಸುತ್ತೀರಾ?

ಶ್ರೀ ವಿಶ್ವನಾಥ್ ರೆಡ್ಡಿ .—ಈ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಆದರಲ್ಲಿ ತಾಂತ್ರಿಕ ಅರ್ಹತೆ ಹೊಂದಿರುವ ಜನ ಸಿಕ್ಕಬೇಕಾಗಿರುತ್ತದೆ. ಎಲ್ಲಿ ಜನ ಸಿಕ್ಕುತ್ತಾರೋ ಅಂಥಾ ಕಡೆ ಭರ್ತಿಮಾಡುವ ಬಗ್ಗೆ ತಿಳಿಸಿದ್ದೇವೆ. ಅದೇ ರೀತಿ ಡಾಕ್ಟರ್‌ಗಳು ಸಿಗದೇ ಇದ್ದರೆ ಸಿವೃತ್ತ ಅಧಿಕಾರಿಗಳನ್ನೂ ಕೂಡ ತೆಗೆದುಕೊಳ್ಳಬಹುದೆಂದು ನಿರ್ಣಯವನ್ನು ತೆಗೆದುಕೊಂಡು ಅವೇ ರೀತಿಯಾಗಿ ಕಾರ್ಯಗತ ಮಾಡುತ್ತಿದ್ದೇವೆ. ಆದುದರಿಂದ ಆದಷ್ಟು ತೀವ್ರವಾಗಿ ಈ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ.

ಮಾಲೂರು ತಾಲ್ಲೂಕಿನ ಭುವನಹಳ್ಳಿಯಲ್ಲಿ ಕೃಷಿ ಕಾಲೇಜು ತೆರೆಯುವ ಬಗ್ಗೆ

121 ಶ್ರೀ ಎ. ನಾಗರಾಜು (ಮಾಲೂರು).— ಮಾನ್ಯ ಕೃಷಿ ಮಂತ್ರಿಗಳು ಈ ಕೆಳಗೆ ಕಂಡಪ್ರಶ್ನೆಗಳನ್ನು ಉತ್ತರಿಸುವರೆ :—

ಅ) ಭುವನಹಳ್ಳಿ ಮಾಲೂರು ತಾಲ್ಲೂಕಿನಲ್ಲಿ ಕೃಷಿ ಕಾಲೇಜನ್ನು ತೆರೆಯಲು ಸರ್ಕಾರವು ಆದೇಶ ಹೊರಡಿಸಿದೆಯೆ ;

ಆ) ಯೋಜನೆಗೆ ತಗಲಿದ ಖರ್ಚು ಎಷ್ಟು ;

ಇ) ಈ ಯೋಜನೆಯನ್ನು ಪೂರ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಎಲ್. ಗೌಡ (ಕೃಷಿಮಂತ್ರಿಗಳು).—ಅ) ಇಲ್ಲ.

ಆ) ಮತ್ತು ಇ) ಈ ಪ್ರಶ್ನೆಗಳು ಮೇಲಿನ (ಅ) ಉತ್ತರದಿಂದ ಉದ್ಭವಿಸುವುದಿಲ್ಲ.

ಶ್ರೀ ಎ. ನಾಗರಾಜ್.—ಅಧ್ಯಕ್ಷರೇ ನಾನು ಈ ಪ್ರಶ್ನೆಯನ್ನು ಕೇಳಿರತಕ್ಕ ಹಿನ್ನಲೆ ಏನೆಂದರೆ 1982 ನೇ ಇಸವಿ ಜುಲೈ ತಿಂಗಳು 31ನೇ ತಾರೀಖಿನ ಒಳಗೆ ಬಂದು ಜಿ. ಒ. ಆಗಿದೆ. ಇದರ ಪ್ರಕಾರವಾಗಿ ಕೃಷಿ ಕಾಲೇಜನ್ನು ತೆರೆಯುವ ಬಗ್ಗೆ 27.18 ಲಕ್ಷ ರೂಪಾಯಿಗಳು ಮಂಜೂರು ಆಗಿತ್ತು. ಆದುದರಿಂದ ಆದನ್ನು ಆದಷ್ಟು ಬೇಗ ಖರ್ಚು ಮಾಡಿ ಆದನ್ನು ಅಪ್ ಗ್ರೇಡ್ ಮಾಡುತ್ತೀರಾ ?

ಶ್ರೀ ಬಿ. ಎಲ್. ಗೌಡ.—ವ್ಯವಸಾಯ ಕಾಲೇಜನ್ನು ಆಲ್ಲಿ ಮಾಡತಕ್ಕಂಥಹಕ್ಕೆ ಸಧ್ಯಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಗಿದೆ ಆ ಸಮಿತಿಯ ವರದಿ ಬಂದ ಮೇಲೆ ಅಪ್‌ಗ್ರೇಡ್ ಮಾಡುವ ಪ್ರಶ್ನೆ ಉದ್ಭವವಾಗುತ್ತದೆ. ಆದುದರಿಂದ ಈಗ ಆ ಪ್ರಶ್ನೆ ಉದ್ಭವವಾಗುವುದಿಲ್ಲ.

ಬಾದಮಿ ತಾಲ್ಲೂಕಿನಲ್ಲಿ ಖಾಲಿ ಇರುವ ಪ್ರಾಥಮಿಕ ಉಪಾಧ್ಯಾಯರುಗಳ ಸಂಖ್ಯೆ

122 ಶ್ರೀ ಬನ್ನಿ ಮಲ್ಲಿಕಾರ್ಜುನ ವೀರಪ್ಪ (ಗುಳೇದಗುದ್ದ).—ಮಾನ್ಯ ಶಿಕ್ಷಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೆ :—

ಅ) ಬಾದಾಮಿ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಜನ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರು ಇದ್ದಾರೆ ? ಇನ್ನೂ ಖಾಲಿ ಇರುವ ಜಾಗಗಳು ಎಷ್ಟು ;

ಆ) ಈ ಉದ್ದೆಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು) :—ಅ) 613. 6 ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಆ) ಈ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ .—ಅಧ್ಯಕ್ಷರೇ ಉತ್ತರದಲ್ಲಿ 613.6 ಎಂದು ಹೇಳಿದ್ದಾರೆ ಇದರಲ್ಲಿ ಯಾವ ಸಂಖ್ಯೆ ಸರಿಯಾಗಿದೆ ?

ಶ್ರೀ ಬಿ. ರಾಚಯ್ಯ .—ಬಾದಾಮಿ ತಾಲ್ಲೂಕಿನಲ್ಲಿ 613 ಜನ ಪ್ರಾಥಮಿಕ ಶಿಕ್ಷಕ — ಶಿಕ್ಷಕಿಯರು ಇದ್ದಾರೆ. 6 ಪ್ರಾಥಮಿಕ ಶಿಕ್ಷಕರ ಹುದ್ದೆಗಳು ಮಾತ್ರ ಖಾಲಿ ಇದೆ.

ಶ್ರೀ ಮಲ್ಲಿಕಾರ್ಜುನ ವೀರಪ್ಪ ಬನ್ನಿ.—ಅದನ್ನು ಯಾವಾಗ ಭರ್ತಿ ಮಾಡುತ್ತೀರಿ ?

ಶ್ರೀ ಬಿ. ರಾಚಯ್ಯ.—ಬಹುಶಃ ಆದನ್ನು ನೀವು ಇಲ್ಲಿಯ ಮುಂದಿನ ಅಧಿವೇಶನಕ್ಕೆ ಬರುವುದರೊಳಗಾಗಿ ಭರ್ತಿ ಮಾಡಿರುತ್ತೇನೆ. ಮುಂದಿನ ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಭರ್ತಿ ಮಾಡಲಾಗುತ್ತದೆ.

ಭದ್ರಾ ನದಿಯ ದಂಡೆಯ ಮೇಲೆ ಇರುವ ಭೀಮನಕಲ್ಲು ಬಗ್ಗೆ

123 ಶ್ರೀ ಎಂ. ಆನಂದರಾವ್ (ಶಿವಮೊಗ್ಗ).—ಮಾನ್ಯ ವಿದ್ಯಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ:—

ಅ) ಚಿಕ್ಕಮಗಳೂರು ಜಿಲ್ಲಾ ಮೂಡಿಗೆರೆ ತಾಲ್ಲೂಕಿನಲ್ಲಿ ಭದ್ರಾನದಿಯ ದಂಡೆಯ ಮೇಲೆ